<u>2 ನೇ ಹೆಚ್ಚುವರಿ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಗೋಕಾಕ.</u>

ಸಿ.ಸಿ. ನಂ.568/2016
ಸಿಡಬ್ಲ್ಯೂ.1 ಪಿಡಬ್ಲ್ಯೂ.1

| | | |
|---|---|---|
| ಸಾಕ್ಷಿಯ ಹೆಸರು | - | ಮಿಟ್ಟುಸಾಬ ಸರದಾರಸಾಬ ಹೂಲಿಕಟ್ಟಿ |
| ವಯಸ್ಸು | - | 56 ವರ್ಷ |
| ಉದ್ಯೋಗ | - | ವ್ಯವಸಾಯ |
| ವಾಸ | - | ಮಕ್ಕಳಗೇರಿ ತಾ ಗೋಕಾಕ |

<u>ದಿನಾಂಕಃ 30-05-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಖ್ಯ ವಿಚಾರಣೆ : ಮಾನ್ಯ.ಸ.ಸ.ಅ.ರವರಿಂದಃ</u>

ಮೃತ ಇಮಾಮಬೂ ಸರದಾರಸಾಬ ಹೂಲಿಕಟ್ಟಿ ನನ್ನ ತಾಯಿಯಾಗಬೇಕು. ಸದರಿಯವರು ಅಪಘಾತದಲ್ಲಿ ತೀರಿಕೊಂಡಿರುತ್ತಾರೆ. ಅಪಘಾತ ಹೇಗೆ ಆಯಿತು , ಯಾರ ತಪ್ಪಿನಿಂದ ಆಯಿತು ಎಂದು ನನಗೆ ಗೊತ್ತಿಲ್ಲ. ಯಾವ ವಾಹನದಿಂದ ಅಪಘಾತ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಅಪಘಾತ ಸಮಯದಲ್ಲಿ ವಾಹನವನ್ನು ಯಾರು ಚಲಾಯಿಸುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಯಾವುದೇ ದೂರನ್ನು ನೀಡಿಲ್ಲ, ನಮ್ಮ ತಾಯಿಯ ಸಾವಿನ ದುಖಃದಲ್ಲಿದ್ದಾಗ ಪೊಲೀಸರು ಒಂದು ಬಳಿ ಹಾಳೆಯ ಮೇಲೆ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು ದೂರನ್ನು ಅದನ್ನು ನಿಪಿ 1 ಅಂತಾ ಗುರುತಿಸಲಾಯಿತು.ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಿಪಿ 1 ರಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಯಾವುದೇ ಮರು ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೇಳಿದರು, ನೀಡಲಾಯಿತು.)

<u>ಪಾಟೀ ಸವಾಲುಃ ಮಾನ್ಯ.ಸ.ಸ.ಅ.ರವರಿಂದಃ</u>

ನನ್ನ ತಂದೆ ತಾಯಿಯವರು ಬಳೆ ವ್ಯಾಪಾರ ಮಾಡಿಕೊಂಡು ನನ್ನ ತಮ್ಮನೊಂದಿಗೆ ಪ್ರತ್ಯೇಕವಾಗಿ ವಾಸವಾಗಿರುತ್ತಾರೆ, ದಿಃ24-11-2015 ರಂದು ನಾನು ಮನೆಯಲ್ಲಿದ್ದಾಗ ಸಂಜೆ 5 ಗಂಟೆ ಸುಮಾರಿಗೆ ಚಾಸಾ-5 ರವರು ನನಗೆ ಫೋನ ಮಾಡಿ ನಿಮ್ಮ ತಾಯಿ ಮಕ್ಕಳಗೇರಿ ಪುಡಕಲಕಟ್ಟಿ ರಸ್ತೆಯ ಮೇಲೆ ದಂಡಿನ ಇವರ ಹೊಲದ ಹತ್ತಿರ ಬಂದಾಗ ಪುಡಕಲಕಟ್ಟಿ ಕಡೆಯಿಂದ ಒಂದು ಜೀಪ್ ಚಾಲಕನು ಅತೀವೇಗ ಮತ್ತು

ನಿಷ್ಕಾಳಜೀತನದಿಂದ ನಡೆಸಿಕೊಂಡು ಬಂದು ರಾಂಗ ಸೈಡನಲ್ಲಿ ಹೋಗಿ ನಿನ್ನ ತಾಯಿಗೆ ಅಪಘಾತ ಪಡಿಸಿದ್ದು , ನಿನ್ನ ತಾಯಿಯ ತಲೆಗೆ , ಹಣೆಗೆ ಪೆಟ್ಟಾಗಿ ಅವರು ಸ್ಥಳದಲ್ಲಿ ತೀರಿಕೊಂಡಿರುತ್ತಾರೆ ಮತ್ತು ಆರೋಪಿ ಅವನಿಗೂ ಸಹ ಗಾಯಗಳಾಗಿದ್ದು ಅವನನ್ನು ಉಪಚಾರಕ್ಕಾಗಿ ನೀಮ್ರಾ ಆಸ್ಪತ್ರೆಗೆ ದಾಖಲಿಸಿರುತ್ತಾರೆ , ಅಪಘಾತಾದಾಗ ಸಂಜೆ 4-45 ಗಂಟೆ ಆಗಿತ್ತು ಅಂತಾ ವಿಷಯ ತಿಳಿಸಿದಾಗ ನಾನು ಮತ್ತು ಚಾಸಾ-7 ಇವರು ಘಟನಾ ಸ್ಥಳಕ್ಕೆ ಹೋಗಿ ನೋಡಿದಾಗ ಅವಳು ತೀರಿಕೊಂಡಿದ್ದು , ಅಪಘಾತ ಪಡಿಸಿದ ಜೀಪ ಗಾಡಿ ನೊಂದಣಿ ಸಂಖ್ಯೆ ಕೆಎ-29 ಪಿ 5787 ಅಲ್ಲಿಯೇ ಇದ್ದು ಮತ್ತು ಜೀಪ ಚಾಲಕನ ವಿರುದ್ಧ ಯೋಗ್ಯ ಕಾನೂನು ಕ್ರಮ ಕೈಗೊಳ್ಳಬೇಕೆಂದು ಅಂತಾ ನಿಪಿ-1 ರಂತೆ ಪೊಲೀಸರಿಗೆ ಚಾಸಾ-8 ರವರ ಮುಖಾಂತರ ಬರೆಸಿ ದೂರನ್ನು ನೀಡಿರುತ್ತೇನೆ ಅಂದರೆ ಸರಿಯಲ್ಲ.

ದೂರನ್ನು ಚಾಸಾ-8 ರವರ ಕಡೆಯಿಂದ ಬರೆಸಿಕೊಟ್ಟಿದ್ದು , ಆರೋಪಿಯನ್ನು ಉಪಚಾರಕ್ಕಾಗಿ ನೀಮ್ರಾ ಆಸ್ಪತ್ರೆಗೆ ಒಯ್ದಿರುತ್ತಾರೆ ಅಂತಾ ಚಾಸಾ-5 ರವರು ಹೇಳಿದಂತೆ ನಿಪಿ-1 ನ್ನು ಬರೆದುಕೊಟ್ಟಿದ್ದು ಮತ್ತು ಆರೋಪಿಯನ್ನು ಚಾಸಾ-5 ರವರು ಅಂಬುಲೆನ್ಸ ಕರೆಸಿ ಗೋಕಾಕಗೆ ಕಳುಹಿಸಿಕೊಟ್ಟಿದ್ದಾಗ ನನಗೆ ಗೊತ್ತಾಯಿತು ಎಂದರೆ ಸರಿಯಲ್ಲ. ಈ ಮೇಲೆ ಹೇಳಿದ ಹಾಗೆ ದಿಃ24-11-2015 ರಂದು ಪೊಲೀಸರಿಗೆ ಮರು ಹೇಳಿಕೆ ನೀಡಿದ್ದೇನೆ ಅಂದರೆ ಸರಿಯಲ್ಲ. ಮರು ಹೇಳಿಕೆಯನ್ನು ನಿಪಿ-2 ಎಂದು ಗುರುತಿಸಲಾಯಿತು. ಈಗ ಆರೋಪಿಯೊಂದಿಗೆ ರಾಜಿ ಆಗಿ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

2 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ.